| ನೋಂದಣಿ ಸಂಖ್ಯೆ Registration No: | | | | | | | | | | | |
|---|---|---|---|---|---|---|---|---|---|---|---|

**E 1 – 2025**

| ವಿಷಯ ಸಂಕೇತ Subject Code | 16 |
|---|---|

# ಐಚ್ಛಿಕ ಕನ್ನಡ / OPTIONAL KANNADA

**ಸಮಯ: 3 ಗಂಟೆ 00 ನಿಮಿಷಗಳು** **(ಒಟ್ಟು ಪ್ರಶ್ನೆಗಳ ಸಂಖ್ಯೆ : 48)** **ಗರಿಷ್ಠ ಅಂಕಗಳು: 80**

Time : 3 Hours 00 Minutes] [Total No. of Questions : 48] [Max. Marks : 80

**ಸೂಚನೆಗಳು :**

1. **ವಿಭಾಗ 'ಅ'** ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

## ಅ–ವಿಭಾಗ

I. ಸರಿಯಾದ ಉತ್ತರವನ್ನು ಆಯ್ಕೆಮಾಡಿ ಬರೆಯಿರಿ. **(5 × 1 = 5)**

1) ನೀಲಾಂಜನೆ ರಂಗದಿಂದ ಅದೃಶ್ಯಳಾದುದು.

(a) ಆದಿದೇವನ ವೈರಾಗ್ಯದಿಂದ

(b) ಇಂದ್ರನ ಆಣತಿಯಿಂದ

(c) ಆಯುಸ್ಸಿನ ಅಂತ್ಯದಿಂದ

(d) ನಾರೀರೂಪದ ಯಂತ್ರದಿಂದ

2) ತನ್ನ ವಿವೇಕ ಜಲದಿಂದ ಅರ್ಜುನನು ಇದನ್ನು ತೊಳೆದನು

(a) ಚಿಂತೆ

(b) ಅಪಜಯ

(c) ಅಹಂಕಾರ

(d) ಅಜ್ಞಾನ

3) ಊರಿಗೆಲ್ಲ ದೊಡ್ಡ ಸಂಭ್ರಮ ಇದು

(a) ಸಂತೆ (b) ತೇರು

(c) ಊರಹಬ್ಬ (d) ಉತ್ಸವ

4) ಬಡವರಿಗೆ ಇವರೇ ಗತಿ

(a) ದೇವರು

(b) ಶ್ರೀಮಂತರು

(c) ಬಡವರು

(d) ರಾಜಕಾರಣಿಗಳು

5) "ಬೀದಿ ಗುಡಿಸುವ ಬಡವನೆದೆಯಲ್ಲಿ ನಾನಿರುವೆ!

ಉಳುತಿರುವ ಒಕ್ಕಲಿಗನೆದೆಯಲ್ಲಿ ನಾನಿರುವೆ!

ಕುಂಟರನು, ಕುರುಡರನು, ದೀನರನು, ಅನಾಥರನು

ಕೈಹಿಡಿದು ಪೊರೆಯುತಿಹನೆದೆಯಿರುವೆ"

ಈ ಮಾತುಗಳಲ್ಲಿ ವ್ಯಕ್ತವಾಗುತ್ತಿರುವಂತೆ ನಿಜಭಕ್ತರು ಯಾರು?

(a) ನೇಮಗಳನ್ನು ಪಾಲಿಸುತ್ತ ದೇವರ ಆರಾಧನೆಯಲ್ಲಿ ತೊಡಗುವವರು

(b) ಗುಡಿಗಳನ್ನು ನಿರಾಕರಿಸುತ್ತಾ ಸುತ್ತುವವರು

(c) ಕಾಯಕವನ್ನು ಮಾಡುತ್ತಾ ಗುಡಿಗಳಿಗೆ ತೆರಳಿ ದೇವರನ್ನು ಕಾಣುವವರು

(d) ಪ್ರಾಮಾಣಿಕವಾಗಿ ಕಾಯಕ ಮಾಡುತ್ತಾ ಅಸಹಾಯಕರ ಸೇವೆ ಮಾಡುವವರು

II. ಸರಿಯಾದ ಉತ್ತರವನ್ನು ಆಯ್ದು ಖಾಲಿ ಜಾಗ ಭರ್ತಿಮಾಡಿ:– **(5 × 1 = 5)**

6) 'ಕೂರ್ಮೆ' ಪದದ ಅರ್ಥ ...............

7) 'ಸುಖ' ಪದದ ತದ್ಭವ ರೂಪ ............



16 Optional Kannada 01-2025.indd 2 06-02-2025 12:19:13

8) ‘ಹೊರಗಣ’ ಪದದ ವಿರುದ್ಧಾರ್ಥಕ ಪದ .........

9) ದ್ವಿರುಕ್ತಿಗೆ ಇದು ಉದಾಹರಣೆ ..........

10) ‘ಇತರೇತರ’ ಪದದ ಬಿಡಿಸಿ ಬರೆದ ರೂಪ ..........

(ಸೊಗ, ಪ್ರೀತಿ, ಓಡೋಡಿ, ಇತರ + ಇತರ, ಒಳಗಣ, ಇತರ +ಏತರ)

III. ಸರಿಯಾದ ಉತ್ತರಗಳನ್ನು ಆಯ್ದು ಹೊಂದಿಸಿ ಬರೆಯಿರಿ:– **(5 × 1 = 5)**

11) ಕ) ಅಂಬರ – ಸೂರ್ಯ, ರವಿ

ಚ) ದಿನಮಣಿ – ವಿದ್ಯೆ

ಟ) ಅರಸು – ನಿರಾಧಾರ

ತ) ಆಧಾರ – ಸೂರ್ಯ, ರತ್ನ

ಪ) ಬಿಜ್ಜೆ – ವಸ್ತ್ರ

– ರಾಜ, ಹುಡುಕು

IV. ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿ:– **(5 × 1 = 5)**

12) ಮಡಕೆ ಮಾಡುವುದು ಯಾರ ಕಾಯಕ?

13) ಒಂದು ಬೀಜವ ಬಿತ್ತಿ ಏನನ್ನು ಬಯಸಬಾರದು?

14) ಯಾವುದು ಧರ್ಮವಲ್ಲ ?

15) ಜಲಗಾರನ ಆರತಿ ಯಾವುದು?

16) ಬೀದಿ ಗುಡಿಸುವ ಬಡವನೆದೆಯಲ್ಲಿ ಯಾರಿದ್ದಾರೆ?

## ಆ–ವಿಭಾಗ

V. ಕೆಳಗಿನ ಪ್ರಶ್ನೆಗಳಲ್ಲಿ **ನಾಲ್ಕಕ್ಕೆ ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ: **(4 × 2 = 8)**

17) ಬೊಬ್ಬುಳಿಕೆಯಂತೆ ಹುಟ್ಟಿದ್ದು ಏನು?

18) ಯಾವ ಯಾವ ಹೂಗಳಿಂದ ಅರ್ಜುನನು ಮರಳ ಲಿಂಗವನ್ನು ಪೂಜಿಸಿದನು?

19) ಗಿರಿಜೆಯ ಪ್ರಶ್ನೆಗೆ ಶಿವನು ಏನೆಂದು ಉತ್ತರಿಸಿದನು?

20) ಕೀಳು ಕಬ್ಬುಣಕ್ಕೂ ಮಾಯೆಗೂ ಕವಿ ಹೇಗೆ ಹೋಲಿಸಿದ್ದಾರೆ?

21) ಮಧ್ಯಮ ಹಾಗೂ ಅಧಮರು ಯಾರು?

VI. ಕೆಳಗಿನ **ನಾಲ್ಕು** ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(4 × 3 = 12)**

22) ದೇಹಾನಿತ್ಯತೆಗಿಂತು ನಾಡೆ ಚೋದ್ಯಂಬಟ್ಟಂ

23) ಎನ್ನವೊಲಾವನೊ ಗಾಂಪನುರ್ವಿಯೊಳ್

24) ನಿಮ್ಮುವನಾಡಿಪ ಭಕ್ತನದಾವಂ

25) ಊರೆಲ್ಲ ನೆಂಟರು ಕೇರಿಯೆಲ್ಲವು ಬಳಗ

26) ಕಣ್ಣು ಕಾಣದ ಗಾವಿಲರು

VII. ಕೆಳಗಿನ **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2 × 4 = 8)**

27) ನೀಲಾಂಜನೆಯು ಅದೃಶ್ಯವಾದ ನಂತರ ಆದಿದೇವನಲ್ಲಿ ಉಂಟಾದ ವಿರಕ್ತಿಯನ್ನು ಚರ್ಚಿಸಿ.

28) ಆಸೆ–ಆಮಿಷಗಳನ್ನು ವಿವೇಕಯುತವಾಗಿ ಹೇಗೆ ಎದುರಿಸಬೇಕೆಂಬುದನ್ನು ಚಾಮರಸನ ಪದ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

29) ಬದುಕಿನ ಮೌಲ್ಯಗಳ ಪ್ರಸ್ತುತತೆಯನ್ನು ಚಿಕ್ಕುಪಾಧ್ಯಾಯರ ಶತಕದ ಹಿನ್ನೆಲೆಯಲ್ಲಿ ಚರ್ಚಿಸಿ.

30) ಸಂಚಿಯ ಹೊನ್ನಮ್ಮ ಹೆಣ್ಣಿನ ಬಗ್ಗೆ ಹೆಮ್ಮೆ ಪಡಲು ಕಾರಣವೇನು?

VIII. ಕೆಳಗಿನ ಯಾವುದಾದರೂ **ಒಂದು** ಪದ್ಯದ ಭಾವಾರ್ಥವನ್ನು ವಿವರಿಸಿ : **(1 × 4 = 4)**

31) "ಮಣಲ ಲಿಂಗದ ಮಸ್ತಕಾಗ್ರದ ಪುಷ್ಪಮಂಜರಿ ಮಾಣದಾ
ಕ್ಷಣಮೆ ತಳ್ತಡಾರ್ದಾ ಕಿರಾತನ ಮಂಡೆಯಲ್ಲಿರೆ ಕಂಡು ಕಾ
ರಣಮಿ ದೇಂ ಪೊಸತೆಂದು ಸಾದ್ಭುತ ಮಾನಸಂ ಮಗುಪ್ಪೇಕ್ಷಿಸು
ತ್ತಣೆಯರಂ ಬಿಡದಿತ್ತ ಲಿಂಗದ ಶೂನ್ಯ ಶೀರ್ಷಮನರ್ಜುನಂ।।"

32) "ಸಿಂದಿಯನು ಸೇವಿಪನು ಹಂದಿಯಂತಿರುತಿಹನು
ಹಂದಿಯೊಂದೆಡೆಗೆ ಉಪಕಾರಿ, ಕುಡುಕನು
ಹಂದಿಗೂ ಕಷ್ಟ ಸರ್ವಜ್ಞ।।"

## ಇ–ವಿಭಾಗ

IX. ಕೆಳಗಿನ ಪ್ರಶ್ನೆಗಳಲ್ಲಿ **ಒಂದು** ಪ್ರಶ್ನೆಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(1 × 2 = 2)**

33) ಕರುವು ಏಕೆ ನಾಚಿಕೊಂಡಿತು?

34) ತೇರಿನ ದಿನ ಸೀರೆಯವನು ಏನೆಂದು ಕೂಗುತ್ತಿದ್ದನು?

X. ಕೆಳಗಿನ **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1 × 4 = 4)**

35) ನಾಗಿ ತೇರು ನೋಡಲು ಹೊರಟ ಪ್ರಸಂಗವನ್ನು ವರ್ಣಿಸಿರಿ.

36) ಪ್ರೇಮದ ಆಕರ್ಷಣೆಗೆ ಒಳಗಾದ ನಾಗಿಯದು ಮಾತ್ರ ದುರಂತ ಕಥೆಯೇ? ಚರ್ಚಿಸಿ.

## ಈ–ವಿಭಾಗ

XI. ಕೆಳಗಿನ **ಎರಡು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ : **(2 × 2 = 4)**

37) ಜಲಗಾರನ ಶಿವ ಎಲ್ಲಿದ್ದಾನೆ?

38) ಧರೆಗೆ ಎಲ್ಲಿಯವರೆಗೆ ಸುಖವಿಲ್ಲ ?

39) ಶಿವಗುಡಿಯ ದೆಸೆಯಿಂದ ಪಾರ್ವರಿಗೆ ಏನೇನು ದೊರೆಯಿತು?

XII. ಕೆಳಗಿನವುಗಳಲ್ಲಿ **ಎರಡು** ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ : **(2 × 3 = 6)**

40) ದೂರದಲ್ಲಿಯೇ ನಿಂತು ಕೈಮುಗಿದು ಬಾ.

41) ಶೂದ್ರರೊಳ್ ಕವಿವರ್ಯರುದಿಸುವರೆ?

42) ಬೀದಿ ಗುಡಿಸುವ ಬಡವನೆದೆಯಲ್ಲಿ ನಾನಿರುವೆ.

XIII. ಕೆಳಗಿನ **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1 × 4 = 4)**

43) ಜಾತ್ರೆಗೆ ಆಹ್ವಾನಿಸಿದ ರೈತನಿಗೆ ಜಲಗಾರ ಏನೆಂದು ಉತ್ತರಿಸಿದನು?

44) ಜಗದ ಜಲಗಾರ ಯಾರು? ವಿವರಿಸಿ.

## ಉ–ವಿಭಾಗ

XIV. ಕೆಳಗಿನ **ಒಂದು** ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ : **(1 × 4 = 4)**

45) ಎನಗನುಕೂಲಮಕ್ಕೆ ಗುಣವರ್ಮನ ಜಾಣ್ನುಡಿ ಪಂಪನಿಂಪುಪೋ।

46) ಕುಣಿವುತೆ ಕೂಗುತೆ ನಲವಿಂ ಬಾರಿಸಿ
ಮಣಿವುತೆ ತಣಿವುತೆ ಮುದದಿಂ ಬಾರಿಸಿ

XV. ಕೆಳಗಿನವುಗಳಲ್ಲಿ **ಒಂದಕ್ಕೆ** ಅಲಂಕಾರ ಹೆಸರಿಸಿ, ಸಮನ್ವಯಗೊಳಿಸಿ : **(1 × 4 = 4)**

47) ನಲ್ಲ ಒಲ್ಲಿಯನೊಲ್ಲ ನೆಲ್ಲಕ್ಕಿ ಬೋನೊಲ್ಲ

ಅಲ್ಲವನು ಒಲ್ಲ , ಮೊಸರೊಲ್ಲ .

48) ಸೌದಾಮಿನಿವೊಲ್ ಭೋಂಕನೆ ಸುರಕಾಮಿನಿ

ರಂಗದೊಳದೃಶ್ಯೆಯಪ್ಪದು ಮಾಗಳ್

16 Optional Kannada 01-2025.indd 8 06-02-2025 12:19:13